# ಭಗವಂತನ ಸಾಕ್ಷಾತ್ಕಾರ



**ಭಗವಂತನ ಸಾಕ್ಷಾತ್ಕಾರ** ದೊರೆತ ನಂತರ ಆತನನ್ನು ಪ್ರತಿಯೊಂದರಲ್ಲೂ ನೋಡಬಹುದು. ಮನುಷ್ಯನಲ್ಲಿ ಆತ ಹೆಚ್ಚಾಗಿ ವ್ಯಕ್ತವಾಗಿದ್ದಾನೆ. ಮತ್ತೆ ಮನುಷ್ಯರ ಮಧ್ಯೆಯೂ ಸಾತ್ತ್ವಿಕ ಭಕ್ತರಲ್ಲಿ, ಎಂದರೆ ಯಾರಲ್ಲಿ ಕಾಮಕಾಂಚನ ಭೋಗೇಚ್ಛೆ ಸಂಪೂರ್ಣವಾಗಿ ಇಲ್ಲವೋ ಅವರಲ್ಲಿ ಇನ್ನೂ ಹೆಚ್ಚಾಗಿ ವ್ಯಕ್ತವಾಗಿರುತ್ತಾನೆ. ಸಮಾಧಿಸ್ಥ ವ್ಯಕ್ತಿ ಕೆಳಕ್ಕೆ ಇಳಿದು ಬಂದುದೇ ಆದರೆ, ಆತನಲ್ಲಿ ಇನ್ನೂ ಹೆಚ್ಚಾಗಿ ವ್ಯಕ್ತವಾಗಿರುತ್ತಾನೆ. ಸಮಾಧಿಸ್ಥ ವ್ಯಕ್ತಿ ಕೆಳಕ್ಕೆ ಇಳಿದು ಬಂದುದೇ ಆದರೆ, ಆತ ಇನ್ನು ಬೇರೆ ಯಾವುದರ ಮೇಲೆ ತಾನೆ ತನ್ನ ಮನಸ್ಸನ್ನು ಇಟ್ಟಾನು? ಅದಕ್ಕಾಗಿಯೇ ಆತನಿಗೆ ಕಾಮಕಾಂಚನ ತ್ಯಾಗಿಗಳಾದ ಶುದ್ಧ ಸಾತ್ತ್ವಿಕ ಭಕ್ತರ ಸಂಗ ಬೇಕಾಗುತ್ತದೆ. ಇಲ್ಲದಿದ್ದರೆ ಆತ ತನ್ನ ಮನಸ್ಸನ್ನು ಬೇರೆ ಯಾವುದರ ಕಡೆಗೆ ತಾನೆ ತಿರುಗಿಸಿ ಇಡಬಲ್ಲ?

ಸಾಧಕನ ಅವಸ್ಥೆಯಲ್ಲಿ "ನೇತಿ" "ನೇತಿ" ಮಾರ್ಗವನ್ನು ಅನುಸರಿಸಿ ಇಡೀ ಮನಸ್ಸನ್ನು ಭಗವಂತನ ಕಡೆ ತಿರುಗಿಸಬೇಕು. ಆದರೆ ಸಿದ್ಧನ ಅವಸ್ಥೆ ಬೇರೆ. ಭಗವಂತನ ಸಾಕ್ಷಾತ್ಕಾರ ದೊರೆತಮೇಲೆ ಅನುಲೋಮ ಮಾಡಿದುದನ್ನೆಲ್ಲ ವಿಲೋಮ ಮಾಡಬೇಕಾಗುತ್ತದೆ—ಎಂದರೆ ತ್ಯಜಿಸಿದುದನ್ನೆಲ್ಲ ಸ್ವೀಕರಿಸಬೇಕಾಗುತ್ತದೆ. ಮಜ್ಜಿಗೆಯನ್ನು ಪ್ರತ್ಯೇಕಿಸಿದರೆ ಬೆಣ್ಣೆ ದೊರೆಯುತ್ತದೆ. ಆಗ ಬೋಧೆಯಾಗುತ್ತದೆ, ಬೆಣ್ಣೆಗೂ ಮಜ್ಜಿಗೆಗೂ ಅನ್ಯೋನ್ಯ ಸಂಬಂಧವಿದೆ ಎಂದು. ಅವೆರಡೂ ಒಂದೇ ವಸ್ತುವಿನಿಂದ ಬಂದಿವೆ. ಬೆಣ್ಣೆ ಮೂಲತಃ ಮಜ್ಜಿಗೆಯಿಂದ ಪ್ರತ್ಯೇಕವಲ್ಲ. ಹಾಗೆಯೇ ಮಜ್ಜಿಗೆಯೂ ಮೂಲತಃ ಬೆಣ್ಣೆಯಿಂದ ಪ್ರತ್ಯೇಕವಲ್ಲ. ಭಗವಂತನ ಸಾಕ್ಷಾತ್ಕಾರ ದೊರೆತಮೇಲೆ ನಿರ್ದಿಷ್ಟ ಅನುಭವವಾಗುತ್ತದೆ, ಆತನೇ ಎಲ್ಲವೂ ಆಗಿದ್ದಾನೆ ಎಂಬುದಾಗಿ. ಕೆಲವದರಲ್ಲಿ ಕಡಮೆಯಾಗಿ, ಇನ್ನು ಕೆಲವದರಲ್ಲಿ ಹೆಚ್ಚಾಗಿ ವ್ಯಕ್ತವಾಗಿದ್ದಾನೆ, ಅಷ್ಟೆ.

ಭಗವಂತನ ಸಾಕ್ಷಾತ್ಕಾರ ಆಯಿತು ಎಂದರೆ ಸಮಾಧಿ ಉಂಟಾಗುತ್ತದೆ. ಬಳಿಕ ಕರ್ಮತ್ಯಾಗವಾಗಿಬಿಡುತ್ತದೆ. ನಾನು ಸಂಗೀತ ವಿದ್ವಾಂಸನ ಸಂಬಂಧವಾಗಿ ವರ್ಣಿಸುತ್ತಿರುವಾಗ ಆತನೇ ಬಂದುಬಿಟ್ಟರೆ ಇನ್ನು ಆತನ ವಿಷಯವಾಗಿ ವರ್ಣಿಸುವ ಆವಶ್ಯಕತೆಯೇನಿದೆ? ಜೇನು ಹುಳು ಎಲ್ಲಿಯವರೆಗೆ ಝೇಂಕರಿಸುತ್ತಿರುತ್ತದೆ? ಹೂವಿನ ಮೇಲೆ ಕೂರದವರೆಗೆ. ಆದರೆ, ಸಾಧಕ ಕರ್ಮತ್ಯಾಗ ಮಾಡಕೂಡದು. ಪೂಜೆ, ಜಪ, ಧ್ಯಾನ, ಸಂಧ್ಯಾವಂದನೆ, ತೀರ್ಥಯಾತ್ರೆ, ಇದನ್ನೆಲ್ಲಾ ಮಾಡಲೇಬೇಕು.

ಭಗವಂತನ ಸಾಕ್ಷಾತ್ಕಾರ ದೊರೆತನಂತರವೂ ಯಾರೇ ಆಗಲಿ ವಿಚಾರದಲ್ಲಿ ತೊಡಗಿರುವುದು ಕಂಡುಬಂದರೆ, ಅವರನ್ನು ಜೇನು ಹುಳುವಿಗೆ ಹೋಲಿಸಬಹುದು. ಜೇನು ಹುಳು ಜೇನು ಕುಡಿಯುತ್ತಿರುವಾಗಲೂ ಒಮ್ಮೊಮ್ಮೆ "ಗುಯ್ಙ್, ಗುಯ್ಙ್" ಅಂತ ಶಬ್ದ ಮಾಡುತ್ತದೆ.

ಎಲ್ಲ ಭೂತಗಳಲ್ಲಿಯೂ ಭಗವಂತ ಇದ್ದಾನೆ. ಇದರಲ್ಲಿ ಸಂದೇಹವೇನಿಲ್ಲ. ಆದರೆ ಭಕ್ತ ಯಾರು ಅಂತೀಯೊ? ಯಾರ ಮನಸ್ಸು ಸರ್ವದಾ ಭಗವಂತನಲ್ಲಿಯೇ ರತವಾಗಿದೆಯೇ ಆತ. ಎಲ್ಲ ಮಾರ್ಗಗಳಿಂದಲೂ ಭಗವಂತನ ಸಾಕ್ಷಾತ್ಕಾರ ಪಡೆಯಬಹುದು. ಎಲ್ಲ ಧರ್ಮಗಳೂ ಸತ್ಯವಾದುವೆ. ನಮ್ಮ ಮುಖ್ಯವಾದ ಕರ್ತವ್ಯ ಛಾವಣಿ ಹತ್ತಿಹೋಗುವುದು. ಆ ಕಾರ್ಯವನ್ನು ಮೆಟ್ಟಿಲ ಸಾಲಿನಿಂದಾಗಲಿ, ಬೊಂಬಿನ ಏಣಿಯಿಂದಾಗಲಿ ಅಥವಾ ಒಂದು ಹಗ್ಗದಿಂದಾಗಲಿ ಸಾಧಿಸಬಹುದು. ಅಷ್ಟೇ ಅಲ್ಲ, ಕೇವಲ ಬೊಂಬಿನಿಂದಲೇ ಹತ್ತಿ ಬಿಡಬಹುದು.

ಭಗವಂತನ ಸಾಕ್ಷಾತ್ಕಾರ ಪಡೆದ ನಂತರ, ಸಮಾಧಿಯಲ್ಲಿ ಆತನೊಡನೆ ಐಕ್ಯವಾದ ನಂತರ ಜ್ಞಾನ, ವಿಚಾರ ಎಲ್ಲ ನಿಂತುಹೋಗಿಬಿಡುತ್ತದೆ. ಜ್ಞಾನ, ವಿಚಾರ ಎಲ್ಲಿಯವರೆಗೆ ಇರುತ್ತದೆ? ಬಹುತ್ವದ ಜ್ಞಾನವಿರುವವರೆಗೆ—ಜೀವ, ಜಗತ್ತು, ನಾನು, ನೀನು ಇವೇ ಮೊದಲಾದವುಗಳ ಬೋಧೆ ಇರುವವರೆಗೆ. ಯಾವಾಗ ಸರಿಯಾಗಿ ಏಕತೆಯ ಜ್ಞಾನ ದೊರೆಯುವುದೊ ಆಗ ಸಾಧಕ ಶಾಂತನಾಗಿಬಿಡುತ್ತಾನೆ. ಉದಾಹರಣೆಗೆ ತ್ರೈಲಿಂಗಸ್ವಾಮಿ.

ಪ್ರಪಂಚದ ಆಸಕ್ತಿ ಲೇಶಮಾತ್ರವಿದ್ದರೂ ಭಗವಂತನ ಸಾಕ್ಷಾತ್ಕಾರವನ್ನು ಪಡೆಯಲಾಗುವುದಿಲ್ಲ. ದಾರದ ಕೊನೆಗೆ ಅಡ್ಡೆಳೆ ಅಂಟಿಕೊಂಡಿದ್ದರೆ ಅದನ್ನು ಸೂಜಿಗೆ ಪೋಣಿಸಲಾಗುವುದಿಲ್ಲ.

ಯಾರಿಗೆ ಭಗವಂತನ ಸಾಕ್ಷಾತ್ಕಾರವಾಗಿದೆಯೊ ಆತನ ಕಾಮಕ್ರೋಧಾದಿಗಳು ನಾಮಮಾತ್ರಕ್ಕೆ ಇರುತ್ತವೆ. ಅವು ಸುಟ್ಟ ಹಗ್ಗದ ಹಾಗೆ. ಅದು ನೋಡುವುದಕ್ಕೇನೊ ಹಗ್ಗದ ಹಾಗೆ ಕಾಣುತ್ತದೆ. ಆದರೆ ಊದಿದರೆ ಎಲ್ಲ ಹಾರಿಹೋಗಿ ಬಿಡುತ್ತದೆ.

ಮನಸ್ಸಿನಲ್ಲಿ ಪ್ರಪಂಚಾಸಕ್ತಿ ಶೂನ್ಯವಾಗಿ ಬಿಟ್ಟೊಡನೆಯೇ ಭಗವಂತನ ದರ್ಶನ ದೊರೆತುಬಿಡುತ್ತದೆ. ಶುದ್ಧ ಮನಸ್ಸಿನಲ್ಲಿ ಮೂಡುವುದೆಲ್ಲವೂ ಭಗವಂತನ ವಾಣಿಯೇ. ಯಾವುದು ಶುದ್ಧ ಮನಸ್ಸೋ, ಅದೇ ಶುದ್ಧ ಬುದ್ಧಿ, ಅದೇ ಶುದ್ಧ ಆತ್ಮ. ಏಕೆಂದರೆ ಭಗವಂತನೊಬ್ಬನನ್ನು ಹೊರತು ಶುದ್ಧವಾದ ವಸ್ತು ಬೇರೊಂದಿಲ್ಲ. ಆದರೆ ಆತನ ಸಾಕ್ಷಾತ್ಕಾರವನ್ನು ಪಡೆದುಕೊಂಡುಬಿಟ್ಟುದೇ ಆದರೆ, ಧರ್ಮಾಧರ್ಮಗಳಿಗೆ ಅತೀತವಾಗಿ ಬಿಡಬಹುದು.

ಭಗವಂತನ ಸಾಕ್ಷಾತ್ಕಾರ ಮಾಡಿಕೊಂಡಿದ್ದರೆ ಮಾತ್ರ ಆತನ ಸಂಬಂಧವಾಗಿ ಯಥಾರ್ಥವಾಗಿ ಹೇಳಬಹುದು. ಯಾರಿಗೆ ಭಗವಂತನ ಸಾಕ್ಷಾತ್ಕಾರವಾಗಿದೆಯೋ, ಆತನಿಗೆ ಚೆನ್ನಾಗಿ ಗೊತ್ತಿದೆ, ಭಗವಂತ ಸಾಕಾರನೂ ಹೌದು, ನಿರಾಕಾರನೂ ಹೌದು ಎಂಬುದು.

*ಶ್ರೀರಾಮಕೃಷ್ಣ ವಚನವೇದ ದಿಂದ*